## ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ: ಸಕಇ 468 ಪಕವಿ 2021 ದಿನಾಂಕ: 11-08-2021.**

"ಪ್ರಬುದ್ಧ" ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಯೋಜನೆ :-

### 1. ಯೋಜನೆಯ ಉದ್ದೇಶ

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ಅಗತ್ಯವಾದ ಧನ ಸಹಾಯ ನೀಡುವ ಉದ್ದೇಶದಿಂದ ಪ್ರಬುದ್ಧ ಯೋಜನೆಯನ್ನು ಜಾರಿಗೆ ತರಲಾಗಿದೆ.

ಈ ಕೆಳಕಂಡ ಕೋರ್ಸ್‌ಗಳನ್ನು ಸರ್ಕಾರ ಕಾಲಕಾಲಕ್ಕೆ ಹೊರಡಿಸಬಹುದಾದ ವಿದೇಶ/ವಿದೇಶಿ ವಿಶ್ವ ವಿದ್ಯಾಲಯ/ ಸಂಸ್ಥೆಗಳಲ್ಲಿ ಅಧ್ಯಯನ ಮಾಡಲು ಅವಕಾಶವಿದೆ.

| Sl. No. | Fields of Study (ಅಧ್ಯಯನದ ಕ್ಷೇತ್ರಗಳು) |
|---|---|
| a. | Engineering and Management |
| b. | Pure Sciences and Applied Sciences |
| c. | Agriculture Sciences and Medicine |
| d. | International Commerce, Economics, Accounting Finance |
| e. | Humanities, Social Science, Fine Arts and Law |

ಯಾವುದೇ ಅಧ್ಯಯನ ಕ್ಷೇತ್ರ ಸೇರಿಸುವ ಅಥವಾ ತೆಗೆದು ಹಾಕುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

### 2. ಸ್ಥಾನ ಹಂಚಿಕೆ:

| ಕ್ರ. ಸಂ. | ವರ್ಗ | ಸ್ಥಾನ ಹಂಚಿಕೆ ಶೇ. | ಷರಾ. |
|---|---|---|---|
| 1 | ಮಹಿಳಾ ಅಭ್ಯರ್ಥಿ | 33% | ನಿಗದಿತ ಗುರಿಗನುಗುಣವಾಗಿ ಅರ್ಹ ಮಹಿಳಾ ಅಭ್ಯರ್ಥಿ ಆಯ್ಕೆಗೆ ಲಭ್ಯವಿಲ್ಲದಿದ್ದರೆ, ಅಂತಹ ಸ್ಥಾನವನ್ನು ಆಯಾ ವರ್ಗದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡುವುದು. |
| 2 | ಅಂಗವಿಕಲ ವಿದ್ಯಾರ್ಥಿ | 05% | ನಿಗದಿತ ಗುರಿಗನುಗುಣವಾಗಿ ಅರ್ಹ ಅಂಗವಿಕಲ ಅಭ್ಯರ್ಥಿ ಆಯ್ಕೆಗೆ ಲಭ್ಯವಿಲ್ಲದಿದ್ದರೆ, ಅಂತಹ ಸ್ಥಾನವನ್ನು ಆಯಾ ವರ್ಗದ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡುವುದು. |
| 3 | ಹಾಸ್ಟಲ್ ವಿದ್ಯಾರ್ಥಿ | 10% | ರಾಜ್ಯ ಸರ್ಕಾರದಿಂದ ನಡೆಸಲ್ಪಡುವ ಸರ್ಕಾರಿ ವಿದ್ಯಾರ್ಥಿ ನಿಲಯದಲ್ಲಿ ಕನಿಷ್ಠ 03 ವರ್ಷ ಅಧ್ಯಯನ ಮಾಡಿರಬೇಕು, ನಿಗದಿತ ಸಂಖ್ಯೆಯ ಹಾಸ್ಟಲ್ ವಿದ್ಯಾಥಿಗಳು ಆಯ್ಕೆಗೆ ಲಭ್ಯವಿಲ್ಲದಿದ್ದರೆ, ಅಂತಹ |

| | | | |
|---|---|---|---|
| | | | ಸ್ಥಾನಗಳಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ವಸತಿ ಶಾಲೆಯಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗೆ ಅವಕಾಶ ಕಲ್ಪಿಸಲಾಗುವುದು. |
| 4 | ವಸತಿ ಶಾಲೆ | 10% | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳಲ್ಲಿ ಕನಿಷ್ಠ 03 ವರ್ಷಗಳ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಶೇ10 ರಷ್ಟು ಸ್ಥಾನವನ್ನು ಭರ್ತಿ ಮಾಡುವುದು.<br>ನಿಗದಿತ ಸಂಖ್ಯೆಯ ಅರ್ಹ ವಸತಿ ಶಾಲೆಯ (KREIS) ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ, ಸರ್ಕಾರಿ ವಿದ್ಯಾರ್ಥಿ ನಿಲಯದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವುದು. |
| 5 | ಸಫಾಯಿ ಕರ್ಮಚಾರಿ ಮಕ್ಕಳು/ಸೂಕ್ಷ್ಮ ಅತಿ ಸೂಕ್ಷ್ಮ ವರ್ಗದ ವಿದ್ಯಾರ್ಥಿಗಳು | 5% | ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದರೆ ಸರ್ಕಾರಿ ಶಾಲೆಯಲ್ಲಿ ಕನಿಷ್ಠ 03 ವರ್ಷ ಅಧ್ಯಯನ ಮಾಡಿದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸುವುದು. |

* ಸರ್ಕಾರಿ ವಿದ್ಯಾರ್ಥಿ ನಿಲಯ / ವಸತಿ ಶಾಲೆ / ಸಫಾಯಿ ಕರ್ಮಚಾರಿ ಮಕ್ಕಳು/ಸೂಕ್ಷ್ಮ, ಅತಿ ಸೂಕ್ಷ್ಮ ವರ್ಗದ ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾದ ಗುರಿಗೆ ಅನುಗುಣವಾಗಿ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದಲ್ಲಿ, ರಾಜ್ಯ ಸರ್ಕಾರ ನಡೆಸುವ ಸರ್ಕಾರಿ ಶಾಲೆಗಳಲ್ಲಿ ಕನಿಷ್ಠ ಮೂರು ವರ್ಷ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡುವುದು, ಒಂದೊಮ್ಮೆ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳು ದೊರೆಯದೇ ಇದ್ದಲ್ಲಿ, ಇತರೆ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸುವುದು.

* ಸ್ಥಾನ ಹಂಚಿಕೆಯ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕೈಬಿಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

## 3. ಅರ್ಜಿ ಸಲ್ಲಿಸಲು ಹೊಂದಿರಬೇಕಾದ ಅರ್ಹತೆಗಳು

1. ಅಭ್ಯರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು.
2. ಕರ್ನಾಟಕ ರಾಜ್ಯ ಪ್ರಕಟಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು.
3. ಇಲಾಖೆಯಿಂದ ಪ್ರಕಟಿಸಲಾದ ವಿದೇಶಿ ವಿಶ್ವವಿದ್ಯಾಲಯದಿಂದ ಆಫರ್ ಲೆಟರ್ ಪಡೆದಿರಬೇಕು.

-----------3

4. ವಿದೇಶಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಲು ಉದ್ದೇಶಿಸಿರುವ ಅಭ್ಯರ್ಥಿಯು ಯು.ಜಿ.ಸಿ ಮಾನ್ಯತೆ ಪಡೆದ ವಿಶ್ವ ವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು. ಪಿ.ಹೆಚ್.ಡಿ ಅಧ್ಯಯನಕ್ಕೆ ತೆರಳುವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ ಪಡೆದಿರಬೇಕು.

5. ವಾರ್ಷಿಕ ರೂ.25.00ಲಕ್ಷ ವರೆಗಿನ ಕೌಟುಂಬಿಕ ಆದಾಯ ಹೊಂದಿರುವವರು ಅರ್ಜಿ ಸಲ್ಲಿಸಬಹುದು. ಆದರೆ ಕಂಡಿಕೆ (4) ರಲ್ಲಿ ವಿವರಿಸಿರುವಂತೆ ಮಿತಿಯಾಧಾರಿತ ಧನಸಹಾಯವನ್ನು ಬಿಡುಗಡೆ ಮಾಡಲಾಗುವುದು.

6. ಅರ್ಹತೆಯಲ್ಲಿ ಯಾವುದೇ ರೀತಿಯ ಬದಲಾವಣೆ ತರುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

**4. ಧನ ಸಹಾಯ ಬಿಡುಗಡೆ:**

| ಕ್ರ. ಸಂ. | ವಾರ್ಷಿಕ ಆದಾಯ | ಧನ ಸಹಾಯ |
|---|---|---|
| 1 | 8.00 ಲಕ್ಷದ ವರೆಗಿನ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ. | ವಿಶ್ವವಿದ್ಯಾನಿಲಯದ ಕೋರ್ಸ್ ಶುಲ್ಕ - ಶೇ. 100<br>ನಿರ್ವಹಣಾ ವೆಚ್ಚ ವಾರ್ಷಿಕ ಗರಿಷ್ಠ - 8.00ಲಕ್ಷಗಳು (ನಿರ್ವಹಣ ವೆಚ್ಚದ ಶೇ.75 ಅಥವಾ 8.00 ಲಕ್ಷಗಳು ಎರಡರಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸುವುದು)<br>ವೀಸಾ ಶುಲ್ಕ (ವಾಸ್ತವಿಕ) _ ಶೇ. 100<br>ವಿಮಾ ಶುಲ್ಕ (ವಾಸ್ತವಿಕ) - ಶೇ. 100<br>ಪುಸ್ತಕ ಮತ್ತು ಇತರೆ ಶುಲ್ಕ(ವಾರ್ಷಿಕ)- 1.00 ಲಕ್ಷ<br>ವಿಮಾನ ಪ್ರಯಾಣ ವೆಚ್ಚ - ಶೇ.100<br>(ಕೋರ್ಸ್ ಪೂರ್ಣಾವಧಿಯಲ್ಲಿ ಒಂದು ಬಾರಿ ಮಾತ್ರ ಏಕನಾಮಿಕ್ ಕ್ಲಾಸ್ ನಲ್ಲಿ ವಿದೇಶದಲ್ಲಿ ವ್ಯಾಸಂಗಕ್ಕೆ ಪ್ರಯಾಣಿಸಲು ಮತ್ತು ವಿದೇಶದಿಂದ ಒಂದು ಬಾರಿ ಸ್ವದೇಶಕ್ಕೆ ಪ್ರಯಾಣಿಸಲು ಅವಕಾಶವಿರುತ್ತದೆ.) |
| 2 | 8.00 ಲಕ್ಷದಿಂದ 15.00 ಲಕ್ಷದ ವರೆಗಿನ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ. | ಈ ಮೇಲ್ಕಂಡ ಎಲ್ಲಾ ವೆಚ್ಚದಲ್ಲಿ ಶೇ. 50 ರಷ್ಟು ವೆಚ್ಚವನ್ನು ಪಾವತಿಸಲಾಗುವುದು. |
| 3 | 15.00 ಲಕ್ಷದಿಂದ 25.00 ಲಕ್ಷದ ವರೆಗಿನ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ. | ಈ ಮೇಲ್ಕಂಡ ಎಲ್ಲಾ ವೆಚ್ಚದಲ್ಲಿ ಶೇ. 33 ರಷ್ಟು ವೆಚ್ಚವನ್ನು ಪಾವತಿಸಲಾಗುವುದು. |

-------------4